# ಮೊಟ್ಟೆಗಳು ಸಾರ್ ಮೊಟ್ಟೆಗಳು!

ನಾಯಕ ನಟರ ಕೇಶವಿನ್ಯಾಸಗಳು ಫ್ಯಾಷನ್ ರೂಪದಲ್ಲಿ ಅಭಿಮಾನಿಗಳ ನಡುವೆ ಚಾಲ್ತಿಗೆ ಬರುತ್ತವೆ. 'ದಿ ವಿಲನ್' ಚಿತ್ರಕ್ಕಾಗಿ ಸುದೀಪ್ ಹಾಗೂ ಶಿವರಾಜ್‌ಕುಮಾರ್ ಮಾಡಿಸಿಕೊಂಡಿದ್ದ ಕೇಶವಿನ್ಯಾಸ ಇತ್ತೀಚೆಗೆ ಸುದ್ದಿಯಾಗಿತ್ತು. ಇದು ಅದಕ್ಕೆ ತದ್ವಿರುದ್ಧವಾದ ಸುದ್ದಿ. ಕೂದಲು ಇಲ್ಲದ ಕಾರಣದಿಂದಲೇ ಸುದ್ದಿಯಾಗಿರುವ ಸಿನಿಮಾ 'ಒಂದು ಮೊಟ್ಟೆಯ ಕಥೆ'.

ವಯಸ್ಸಾದಂತೆಲ್ಲ ತಲೆಬೋಳಾಗುವುದು ಸಹಜ. ಆದರೆ, ಮದುವೆಯಾಗಬೇಕಾದ ತರುಣರ ತಲೆ ಮಿರಮಿರನೆ ಮಿಂಚತೊಡಗಿದರೆ? ಇಂಥದೊಂದು ವಿಶಿಷ್ಟ ಪರಿಕಲ್ಪನೆ 'ಒಂದು ಮೊಟ್ಟೆಯ ಕಥೆ' ಚಿತ್ರದ ಮೂಲಕ ಅನಾವರಣಗೊಂಡಿದೆ. ಇಪ್ಪತ್ತೆಂಟು ವರ್ಷಕ್ಕೆಲ್ಲ ಕೂದಲು ಕಳೆದುಕೊಳ್ಳುವ ಯುವಕನೊಬ್ಬನ ತವಕತಲ್ಲಣಗಳ ಕಥೆ ಚಿತ್ರದಲ್ಲಿದೆ. ಇದೊಂದು ವಿಷಾದಭರಿತ ಕಾಮಿಡಿ ಸಿನಿಮಾ ಎನ್ನುವುದು ಚಿತ್ರತಂಡದ ಬಣ್ಣನೆ. ವೈಯಕ್ತಿಕ ನೆಲೆಗಟ್ಟಿನ ಈ ಕಥನ, ಸಮಾಜದ ಓರೆಕೋರೆಗಳನ್ನೂ ಬೆಟ್ಟುಮಾಡಿ ತೋರಿಸುತ್ತದಂತೆ.

ಮೊಟ್ಟೆಯ ಕಥೆ ರಾಜ್ ಬಿ. ಶೆಟ್ಟಿ ಅವರದು. ನಿರ್ದೇಶನದ ಜೊತೆಗೆ ನಾಯಕನ ಪಾತ್ರವನ್ನೂ ರಾಜ್ ನಿರ್ವಹಿಸಿದ್ದಾರೆ. ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಚಿತ್ರರಸಿಕರ ಗಮನಸೆಳೆದಿದೆ. ಮಿಥುನ್ ಮುಕುಂದನ್ ಸಂಗೀತ ಸಂಯೋಜನೆಯಲ್ಲಿ ರೂಪುಗೊಂಡಿರುವ ಬೋಳು ತಲೆಯವರ ಪಾಡು ಬಣ್ಣಿಸುವ ಗೀತೆಯೂ ಜನಪ್ರಿಯವಾಗುತ್ತಿದೆ. ಅಮೃತಾ ನಾಯಕ್ ಹಾಗೂ ಶ್ರೇಯಾ ಅಂಚನ್ ತಾರಾಗಣದಲ್ಲಿರುವ ಪ್ರಮುಖರು.

ಮೊಟ್ಟೆ ಬಳಗದ ಸಿನಿಮಾಸಕ್ತಿ ಕಂಡಿರುವ 'ಯುಟರ್ನ್' ಖ್ಯಾತಿಯ ಪವನ್ ಕುಮಾರ್, ಈ ಸಿನಿಮಾವನ್ನು ಜನರಿಗೆ ಮುಟ್ಟಿಸುವ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಸದ್ಯಕ್ಕೆ ನ್ಯೂಯಾರ್ಕ್, ಲಂಡನ್ ಎಂದು ವಿವಿಧ ಚಿತ್ರೋತ್ಸವಗಳತ್ತ ಮೊಟ್ಟೆಯ ಪಯಣ ಸಾಗಿದೆ.






# ಪೂಜಾ ದಶಾವತಾರ!

ಮುಂಗಾರು ಸನ್ನಿಹಿತವಾಗುತ್ತಿರುವಂತೆ ಪೂಜಾ ಗಾಂಧಿ ಕೂಡ ಚುರುಕಾಗಿದ್ದಾರೆ. ಕಳೆದ ವಾರ ಪೂಜಾ ನಟನೆಯ ಮೂರು ಸಿನಿಮಾಗಳು ಒಂದೇ ದಿನ ಮುಹೂರ್ತ ನಡೆಸಿವೆ. ಇತ್ತೀಚೆಗಷ್ಟೇ ಸಿನಿಮಾ ನಿರ್ಮಾಣ ಸಂಸ್ಥೆ ಆರಂಭಿಸಿ, ಒಮ್ಮೆಗೇ ಹತ್ತು ಸಿನಿಮಾಗಳ ತಯಾರಿಕೆಯ ಕನಸನ್ನು ಹಂಚಿಕೊಂಡಿದ್ದ ಪೂಜಾ, ಅದರ ಭಾಗವಾಗಿ ಮೂರು ಸಿನಿಮಾಗಳ ನಿರ್ಮಾಣಕ್ಕೆ ಚಾಲನೆ ನೀಡಿದ್ದಾರೆ.,

'ಉತಾಹಿ', 'ಬ್ಲಾಕ್ ವರ್ಸಸ್ ವೈಟ್' ಹಾಗೂ 'ಭೂ' ಸೆಟ್ಟೇರಿದ ಸಿನಿಮಾಗಳ ಹೆಸರು. ಈ ವಿಚಿತ್ರ ಶೀರ್ಷಿಕೆಗಳ ಅರ್ಥವೇನು ಎನ್ನುವುದನ್ನು ತಿಳಿಯಲು ಸಿನಿಮಾಗಳನ್ನೇ ನೋಡಬೇಕು.

ಪೂಜಾ ನಿರ್ಮಾಣದ ಮೂರು ಚಿತ್ರಗಳ ಕಥೆ, ಚಿತ್ರಕಥೆ ಮತ್ತು ನಿರ್ದೇಶನ ಜೆ.ಡಿ. ಚಕ್ರವರ್ತಿ ಅವರದು. ಇವುಗಳ ಪೈಕಿ 'ಉತಾಹಿ' ಪ್ರೇಮಕಥೆಯನ್ನು ಹೊಂದಿದ್ದರೆ, 'ಬ್ಲಾಕ್ ವರ್ಸಸ್ ವೈಟ್' ಪ್ರಚಲಿತ ವಿದ್ಯಮಾನಗಳ ಕಥೆ ಒಳಗೊಂಡಿದೆಯಂತೆ. ಈ ಎರಡೂ ಸಿನಿಮಾಗಳ ಮುಖ್ಯಪಾತ್ರಗಳಲ್ಲಿ ಪೂಜಾ ಅವರೇ ನಟಿಸುತ್ತಿದ್ದಾರೆ. 'ಭೂ' ಎನ್ನುವುದು ಹಾರರ್ ಕಥನದ ಸಿನಿಮಾ. ಮೂರು ಚಿತ್ರಗಳಲ್ಲಿ 'ಉತಾಹಿ' ಚಿತ್ರದ ಶೂಟಿಂಗ್ ಮೊದಲು ಆರಂಭವಾಗಲಿದೆ.

ಸ್ವಂತ ನಿರ್ಮಾಣದ ಸಿನಿಮಾಗಳ ಸಂಭ್ರಮ ಒಂದೆಡೆಯಾದರೆ, ಇನ್ನೊಂದೆಡೆ ಪೂಜಾ ನಟನೆಯ 'ದಂಡುಪಾಳ್ಯ–2' ಬಿಡುಗಡೆಯ ಸಿದ್ಧತೆ ನಡೆಸುತ್ತಿದೆ. 'ದಂಡುಪಾಳ್ಯ'ದ ಮೊದಲ ಆವೃತ್ತಿಯಂತೆ, ಈ ಚಿತ್ರದಲ್ಲೂ ಪೂಜಾ ಅವರ ಪಾತ್ರ ವಿಭಿನ್ನವಾಗಿದೆಯಂತೆ. ಪೂಜಾ ಹಾಗೂ ಮತ್ತೊಬ್ಬ ಹೆಣ್ಣು ಚುಂಬಿಸಿಕೊಳ್ಳುತ್ತಿರುವ ಫೋಟೊಗಳು ಅಂತರ್ಜಾಲದಲ್ಲಿ ಹರಿದಾಡುತ್ತಿದ್ದು, ಪೂಜಾ ಅವರ ಪಾತ್ರದ ಬಗ್ಗೆ ನಿರೀಕ್ಷೆಗಳನ್ನು ಮೂಡಿಸಿವೆ.